ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಶೈವಿ/04/ಸುತ್ತೋಲೆ/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಶೇಷಾದ್ರಿ ರಸ್ತೆ, ಬೆಂಗಳೂರು-560001.
ದಿನಾಂಕ : 19.05.2022.

## ಸುತ್ತೋಲೆ

ವಿಷಯ : ಇಲಾಖಾ ವ್ಯಾಪ್ತಿಯ ಪದವಿ ಕಾಲೇಜುಗಳಲ್ಲಿ ರೋವರ್ಸ್ - ರೇಂಜರ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಆಯೋಜಿಸುವ ಬಗ್ಗೆ.

ಉಲ್ಲೇಖ : ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಪತ್ರಸಂಖ್ಯೆ : BSG/SHQ/204/2022-23, ದಿನಾಂಕ : 30.04.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಕೌಟಿಂಗ್-ಗೈಡಿಂಗ್ / ರೋವರಿಂಗ್-ರೇಂಜರಿಂಗ್ ಚಟುವಟಿಕೆಗಳನ್ನು 2022ನೇ ಸಾಲಿನ ಮೇ ಮಾಹೆಯಲ್ಲಿ ಏರ್ಪಡಿಸಿ, ಆಯಾಯ ಕಾಲೇಜುಗಳ ಹಂತದಲ್ಲಿ 3 ರಿಂದ 7 ದಿನಗಳ ಅವಧಿಯಲ್ಲಿ "ಬೇಸಿಗೆ ಶಿಬಿರ"ವನ್ನು ಆಯೋಜಿಸಿ ಸ್ಕೌಟಿಂಗ್-ಗೈಡಿಂಗ್ / ರೋವರಿಂಗ್-ರೇಂಜರಿಂಗ್ ಕೌಶಲ್ಯಗಳಾದ ಪ್ರಥಮ ಚಿಕಿತ್ಸೆ, ಪಯನರಿಂಗ್, ಮ್ಯಾಪಿಂಗ್, ಎಸ್ಟಿಮೇಷನ್, ಶಿಬಿರಾಗ್ನಿ, ಸರ್ವಧರ್ಮ ಪ್ರಾರ್ಥನೆ, ಚಾರಣ, ಪ್ರಕೃತಿ ಅಧ್ಯಯನ ಇತ್ಯಾದಿ ತರಬೇತಿಗಳನ್ನು ಇಲಾಖಾ ವ್ಯಾಪ್ತಿಯ ಕಾಲೇಜುಗಳಲ್ಲಿ ಆಯೋಜಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಈ ಸಂಬಂಧ, ಕಾಲೇಜುಗಳಲ್ಲಿ ಸೆಮಿಸ್ಟರ್‌ವಾರು ಪದವಿ ಪರೀಕ್ಷೆಗಳು ನಡೆಯುತ್ತಿರುವುದರಿಂದ ಪರೀಕ್ಷಾ ಕಾರ್ಯಕ್ಕೆ ಹಾಗೂ ಕಾಲೇಜಿನ ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆಯಾಗದಂತೆ ಪ್ರಾಂಶುಪಾಲರುಗಳೆ ನಿರ್ಧರಿಸಿ, ಕಾರ್ಯಕ್ರಮಗಳನ್ನು ನಡೆಸಲು ತಿಳಿಸಿ, ಸದರಿ ಕಾರ್ಯಕ್ರಮ/ಶಿಬಿರಕ್ಕೆ ತಗಲುವ ವೆಚ್ಚವನ್ನು ಸ್ಕೌಟ್ಸ್-ಗೈಡ್ಸ್ ಖಾತೆಯಿಂದ ಭರಿಸಲು ಸೂಚಿಸಿ ಅನುಮತಿ ನೀಡಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ :

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ.
2. ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, State headquarters, No. 39, "Shanthigruha", Palace Road, Bengaluru – 560001.
4. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
5. ಕಛೇರಿ ಪ್ರತಿ.